**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ಸಂಖ್ಯೆ : 571/2024**

**ಚಾ.ಸಾಃ 7, ಫ್ರಾ.ಸಾಃ 3**

| | |
|---|---|
| ಸಾಕ್ಷಿದಾರನ ಹೆಸರು | ಮಂಜುನಾಥ ನಾಯ್ಕ |
| ತಂದೆಯ ಹೆಸರು | ವೆಂಕಪ್ಪ ನಾಯ್ಕ |
| ವಯಸ್ಸು | 34 ವರ್ಷ |
| ಉದ್ಯೋಗ | ಚಾಲಕ |
| ವಾಸ್ತವ್ಯ | ಮಾಗೋಡ, ತಾಃ ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 27-02-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿದ್ದೇನೆ.

ದಿನಾಂಕ 18-01-2024 ರಂದು ಕೆಲಸದ ನಿಮಿತ್ತ ನಾನು ಹೊನ್ನಾವರಕ್ಕೆ ಬಂದು ನನ್ನ ಕೆಲಸ ಮುಗಿಸಿಕೊಂಡು ವಾಪಸ್ಸು ಗೇರುಸೊಪ್ಪಾ ಕಡೆಗೆ ಹೋಗುತ್ತಿದ್ದಾಗ ಮಧ್ಯಾಹ್ನ 03-40 ರ ವೇಳೆಗೆ ಹಂಗಾರಗುಂಡಿ ಹತ್ತಿರ ಒಂದು ಕಲ್ಲಂಗಡಿ ಹಣ್ಣಿನ ಅಂಗಡಿಯ ಹತ್ತಿರ ಹೋಗುತ್ತಿದ್ದಾಗ ನನ್ನ ಮುಂದೆ ಒಂದು ಪಲ್ಸರ್ ಬೈಕನಲ್ಲಿ ನನ್ನ ಪರಿಚಯಸ್ಥರಾದ ಮೃತ ಗಣೇಶ ಮತ್ತು ಚಾಸಾ-6 ರವರು ಹೋಗುತ್ತಿದ್ದರು. ಆ ವೇಳೆಗೆ ಗೇರುಸೊಪ್ಪಾ ಕಡೆಯಿಂದ ಒಂದು ಬೊಲೆರೋ ವಾಹನ ತುಂಬಾ ಸ್ಪೀಡಾಗಿ ಮತ್ತು ಅಜಾಗರೂಕತೆಯಿಂದ ಬರುತ್ತಿತ್ತು. ನಾನು ನೋಡುತ್ತಾ ನೋಡುತ್ತಾ ಇರುವಾಗಲೇ ಸದರಿ ಬೊಲೆರೊ ವಾಹನ ಏಕಾ ಏಕಿ ಬಲಕ್ಕೆ ತಿರುಗಿ ನನ್ನ ಮುಂದೆ ಹೋಗುತ್ತಿದ್ದ ಪಲ್ಸರ್ ಬೈಕಿಗೆ ಡಿಕ್ಕಿಪಡಿಸಿತು. ತಕ್ಷಣ ಬೈಕಿನಲ್ಲಿದ್ದವರು ರಸ್ತೆಯ ಬದಿಯ ಕಾಲುವೆಗೆ ಬಿದ್ದಿರುತ್ತಾರೆ. ಗೂಡ್ಸ ವಾಹನವೂ ಸಹ ಡಿಕ್ಕಿಯಾದ ನಂತರ ರಸ್ತೆಯ ಬಲಭಾಗದ ಕಾಲುವೆಗೆ ಬಂದು ನಿಲ್ಲಿಸಿರುತ್ತಾನೆ. ನಾನು ನನ್ನ ಬೈಕನ್ನು ಸೈಡಿಗೆ ನಿಲ್ಲಿಸಿ ನೋಡಲಾಗಿ ಚಾಸಾ-6 ರವರಿಗೆ ತೀವ್ರವಾದ ಗಾಯಗಳಾಗಿದ್ದು ಒಂದು ಖಾಸಗಿ ಕಾರಿನ ಮೂಲಕ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಹಿಂಬದಿ ಸವಾರನನ್ನು ನೋಡಿದಾಗ ಆತನ ಕಾಲಿನ ಮೂಳೆ ಮುರಿದು ಬಲವಾದ ಗಾಯವಾಗಿದ್ದು ಎದೆಯ ಮೇಲೆ ಸಂಪೂರ್ಣವಾಗಿ ಡ್ಯಾಮೇಜ್ ಆಗಿದ್ದು ಆತ ಉಸಿರಾಡುತ್ತಿರಲಿಲ್ಲ. ಆ್ಯಂಬುಲನ್ಸ ಮೂಲಕ ಆತನನ್ನು ಆಸ್ಪತ್ರೆಗೆ ಕಳುಹಿಸಿದೆವು. ಅಪಘಾತ ಆದ ನಂತರ ಬೊಲೆರೋದಿಂದ ಇಬ್ಬರು ಓಡಿ ಹೋದರು. ಬೊಲೆರೋ ಚಾಲಕನನ್ನು ನೋಡಿದ್ದೇನೆ. ಈಗ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 1 ನೇ ಆರೋಪಿಯು ಬೊಲೆರೋ ವಾಹನವನ್ನು ಅತಿಯಾದ ವೇಗದಲ್ಲಿ ಚಲಾಯಿಸಿಕೊಂಡು ಬಂದು ಏಕಾ ಏಕಿ ಬಲಕ್ಕೆ ತಿರುಗಿಸಿ ಎದುರಿಗೆ ಇದ್ದ ಬೈಕಿಗೆ ಡಿಕ್ಕಿಪಡಿಸಿರುತ್ತಾರೆ.

ದಿನಾಂಕ 02-02-2024 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಸಿ 1 ನೇ ಆರೋಪಿಯನ್ನು ತೋರಿಸಿದರು. ನಾನು ಈತನೇ ಬೊಲೆರೋ ವಾಹನದ ಚಾಲಕನೆಂದು ಗುರುತಿಸಿರುತ್ತೇನೆ.

**ಪಾಟೀಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ.ಆರ್. ನಾಯ್ಕರಿಂದಃ**

ನಾನು ಟೂರಿಸ್ಟ ವಾಹನದ ಚಾಲಕ. ಯಾರು ಕರೆದರೂ ಚಾಲನೆ ಮಾಡಲು ಹೋಗುತ್ತೇನೆ. ಅಪಘಾತದ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಪೋಲೀಸರಿಗೆ ನಾನು ಚಾಲಕ ಎಂದು ಹೇಳಿದ್ದೇನೆ, ಕೂಲಿ ಅಂತ ಹೇಳಿಲ್ಲ. ಮೃತ ಗಣೇಶ ಗೌಡನನ್ನು ದಿಬ್ಬಣಗಲ್ ನವರು. ಅವರ ಮನೆ ಎಲ್ಲಿದೆ ಗೊತ್ತಿಲ್ಲ, ಅವರಿಗೆ ಒಂದು ಬೊಲೆರೋ ವಾಹನ ಇರುವುದರಿಂದ ಪರಿಚಯ. ಚಾಸಾ-6 ಮೃತ ಗಣೇಶನ ಜೊತೆ ಇರುವುದರಿಂದ ಪರಿಚಯ. ನಮ್ಮ ಊರಿನಲ್ಲಿ ಒಂದು ಟೂರ್ನಮೆಂಟ್ ಇದ್ದು ಅದಕ್ಕೆ ಅನುಮತಿ ಕೇಳಲು ಪೋಲೀಸ್ ಠಾಣೆಗೆ ಬಂದಿದ್ದೆ. ಪೋಲಿಸರು ಚಲನ್ ತುಂಬಬೇಕು ಎಂದು ಹೇಳಿದ್ದರಿಂದ ವಾಪಸ್ಸು ಹೋಗಿದ್ದೆ. ಅಪಘಾತದ ದಿನ ನಾನು ಒಬ್ಬನೇ ಹೊನ್ನಾವರಕ್ಕೆ ಬಂದಿದ್ದೆ. ಊಟ ಮಾಡಿ ಮಧ್ಯಾಹ್ನ 02-00 ಗಂಟೆ ಸಮಯಕ್ಕೆ ಹೊನ್ನಾವರದಿಂದ ಹೊರಟಿರುತ್ತೇನೆ. ನಾನು ತೂಗುಸೇತುವೆಯನ್ನು ದಾಟಿ ಮಾಗೋಡಿಗೆ ಹೋಗಬೇಕು. ಅಪಘಾತ ಸ್ಥಳ ಹೊನ್ನಾವರದಿಂದ ಸುಮಾರು 20 ಕಿಲೋಮೀಟರ್ ದೂರ. ನಾನು ಮೂಡ್ಕಣಿ ಚರ್ಚಕ್ರಾಸ್ ಹತ್ತಿರ ಒಂದು ಅಂಗಡಿ ಇದ್ದು ಅಲ್ಲಿ ನಾನು ನಿಂತಿದ್ದೆ. ನಂತರ ಅಲ್ಲಿಂದ ನಾನು ಹೊರಟಾಗ ಚಾಸಾ-6 ರವರು ಹೊನ್ನಾವರದಿಂದ ನನಗೆ ಅಲ್ಲಿ ಸಿಕ್ಕಿರುತ್ತಾರೆ. ಸದರಿ ಸ್ಥಳದಲ್ಲಿ ಅವರು ಹೋಗುವಾಗ ಹಿಂಬದಿ ಸವಾರ ಗಣೇಶ ಗೌಡ ಎಂಬುದನ್ನು ನೋಡಿದ್ದೇನೆ. ಅಲ್ಲಿಂದ ಮುಂದೆ ಅವರು ನನ್ನ ಮುಂದೆ ಹೋಗುತ್ತಿದ್ದರು. ಚಾಸಾ-6 ರವರು ಆ ದಿನ ಹೆಲ್ಮೆಟ್ ಹಾಕಿಕೊಂಡಿದ್ದರು, ಹಿಂಬದಿ ಸವಾರ ಹೆಲ್ಮೆಟ್ ಹಾಕಿಕೊಂಡಿರಲಿಲ್ಲ. ಆದ್ದರಿಂದ ಆತ ಗಣೇಶ ಅಂತ ಗೊತ್ತಾಗಿರುತ್ತದೆ. ಚರ್ಚಕ್ರಾಸನಿಂದ ಅಪಘಾತ ಸ್ಥಳವು ಸುಮಾರು 400 ಮೀಟರ್ ದೂರ. ಚಾಸಾ-6 ರವರು ನನಗಿಂತ ಸುಮಾರು 30 ಅಡಿ ಮುಂದೆ ಹೋಗುತ್ತಿದ್ದರು. ರಸ್ತೆಯ ಎಡ ಅಂಚಿನಿಂದ ನಾನು 6-7 ಅಡಿ ದೂರದಲ್ಲಿ ಹೋಗುತ್ತಿದ್ದೆ. ರಸ್ತೆಯ ಮಧ್ಯದ ಬಿಳಿ ಪಟ್ಟಿಯಿಂದ ಸುಮಾರು 5 ಅಡಿ ದೂರದಲ್ಲಿ ಹೋಗುತ್ತಿದ್ದೆ.

ಅಪಘಾತ ಆದ ಸ್ಥಳದಲ್ಲಿ ರಸ್ತೆ ಸುಮಾರು 100 ಮೀಟರನಷ್ಟು ನೇರವಾಗಿದೆ ಎಂದರೆ ಸುಮಾರು 70 ಮೀಟರಷ್ಟು ದೂರ ನೇರವಾಗಿದ್ದು ನಂತರದಲ್ಲಿ ರಸ್ತೆ ನೇರವಾಗಿದ್ದರೂ ಇಳಿಜಾರಿನಿಂದ ಕೂಡಿದೆ. ಅಪಘಾತ ಆದ ಸ್ಥಳದಿಂದ ಸುಮಾರು 20 ಅಡಿ ಮುಂದೆ ರಸ್ತೆಯ ಬಲಬದಿಗೆ ಕಲ್ಲಂಗಡಿ ಹಣ್ಣಿನ ಅಂಗಡಿ ಇದೆ. ಅಪಘಾತ ಸ್ಥಳದಿಂದ ಸುಮಾರು 35 ಅಡಿ ದೂರದಲ್ಲಿ ಅಪಘಾತದ ಪೂರ್ವದಲ್ಲಿ ಬೊಲೆರೋ ವಾಹನವನ್ನು ನೋಡಿರುತ್ತೇನೆ. ಅಪಘಾತ ಸ್ಥಳದಿಂದ 35 ಅಡಿ ದೂರದ ನಂತರದಲ್ಲಿ ಇಳಿಜಾರು ಇದ್ದು ದೂರದಲ್ಲಿ ವಾಹನಗಳು ಬರುವುದು ಕಾಣುವುದಿಲ್ಲ. ನಾನು ನೋಡಿದಾಗ ಬೊಲೆರೋ ವಾಹನವು ತನ್ನ ರಸ್ತೆಯ ಎಡಬದಿಯಲ್ಲಿ ಬರುತ್ತಿದ್ದರು. ಆದರೆ ಬರುತ್ತಾ ಬರುತ್ತಾ ಚಾಸಾ-6 ರವರ ಬೈಕಿನಿಂದ ಸುಮಾರು 15-20 ಅಡಿ ದೂರದಲ್ಲಿದ್ದಾಗ ಏಕಾ ಏಕಿ ಬಲಕ್ಕೆ ತೆಗೆದುಕೊಂಡು ಚಾಸಾ-6 ರವರಿಗೆ ಡಿಕ್ಕಿಪಡಿಸಿರುತ್ತದೆ. ಚಾಸಾ-6 ರವರಿಗೆ ಬೊಲೆರೋ ವಾಹನ ತಪ್ಪಿಸಿಕೊಳ್ಳಲು ಯಾವುದೇ ಅವಕಾಶ ಇರಲಿಲ್ಲ. ಬೈಕ್ ಚಾಲಕ ಅಪಘಾತ ತಪ್ಪಿಸಿಕೊಳ್ಳಲು ಪ್ರಯತ್ನಿಸಿರುತ್ತಾರೆ. ಆದರೂ ಡಿಕ್ಕಿಯಾದ ನಂತರ ಬೊಲೆರೋ ವಾಹನವು ಸೀದಾ ಬಲಕ್ಕೆ ಗಟಾರಿನ ಪಕ್ಕಕ್ಕೆ ಹೋಗಿ ನಿಂತಿರುತ್ತದೆ. ನನ್ನ ಮುಂದೆ ಚಾಸಾ-6 ರವರ ಬೈಕು ಹೋಗುತ್ತಿತ್ತು. ಅವರ ಮುಂದೆ ಯಾವುದೇ ವಾಹನ ಹೋಗುತ್ತಿರಲಿಲ್ಲ. ಆರೋಪಿ ನನಗೆ ಮೊದಲೇ ಪರಿಚಯ ಇಲ್ಲ. ಅಪಘಾತ ಆದ ನಂತರ ಆತ ಬೊಲೆರೋ ಬಾಗಿಲು ತೆಗೆದು ಓಡಿ ಹೋಗುವುದನ್ನು

ನೋಡಿದ್ದೇನೆ. ಆತನನ್ನು ಹಿಡಿಯಲು ನಾನು ಪ್ರಯತ್ನಿಸಲಿಲ್ಲ. ನನ್ನ ಹಿಂದೆ ಸಂತೋಷ ಎನ್ನುವವರು ಇನ್ನೊಂದು ಬೈಕನಲ್ಲಿ ಬರುತ್ತಿದ್ದರು. ಅವರು ನಾವು ಸೇರಿ ಗಾಯಾಳುವನ್ನು ಆಸ್ಪತ್ರೆಗೆ ಕಳುಹಿಸಿರುತ್ತೇವೆ. ಸಂತೋಷ ಮೂಡ್ಕಣಿಯವರು. ನನಗೆ ಪರಿಚಯಸ್ಥರು. ಗಣೇಶ ಅವರ ಹೆಸರು ನನಗೆ ಮೊದಲೇ ಗೊತ್ತಿತ್ತು. ಚಾಸಾ-6 ಅವರ ಜೊತೆ ಇರುತ್ತಿದ್ದರು. ಅಪಘಾತಕ್ಕೆ ಮೊದಲು ಅವರ ಹೆಸರು ಗೊತ್ತಿರಲಿಲ್ಲ. ಮೃತ ಗಣೇಶ ಗೌಡರವರ ಹೆಸರು ಸಂತೋಷ ಗೌಡನಿಂದ ತಿಳಿಯಿತು ಎಂದು ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ಅಪಘಾತ ಆದ ನಂತರ ಬೈಕಿನ ಡೂಮು ಒಡೆದು ಸ್ಥಳದಲ್ಲಿ ಬಿದ್ದಿತ್ತು. ರಸ್ತೆಯ ಮೇಲೆ ರಕ್ತ ಬಿದ್ದಿರಲಿಲ್ಲ. ಮೃತ ರಸ್ತೆಯಿಂದ ಪಕ್ಕಕ್ಕೆ ಗಟಾರಿನ ಕಡೆಗೆ ಬಿದ್ದಿರುತ್ತಾನೆ. ಉಳಿದಂತೆ ಸ್ಥಳದಲ್ಲಿ ಏನು ಬಿದ್ದಿತ್ತು ಎಂದು ನಾನು ಗಮನಿಸಲಿಲ್ಲ. ಮೃತನ ದೇಹವನ್ನು ಸ್ಟ್ರಕ್ಚರ್ ಮೂಲಕ ಆ್ಯಂಬುಲನ್ಸಗೆ ಇಟ್ಟು ಕಳುಹಿಸಿರುತ್ತೇನೆ. ನಾನು ಆಸ್ಪತ್ರೆಗೆ ಹೋಗಲಿಲ್ಲ. ನಾನು ಪೋಲೀಸರಿಗೆ ಆರೋಪಿಯನ್ನು ಗುರುತಿಸಿ ಹೇಳಿಕೆ ಕೊಡುವಾಗ 1 ನೇ ಆರೋಪಿ ಒಬ್ಬರೇ ಇದ್ದರು ಬೇರೆ ಯಾರೂ ಇರಲಿಲ್ಲ. ಅಪಘಾತ ಆದ ಸ್ಥಳದಲ್ಲಿ ನಾನು ಇರಲೇ ಇಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮರಳಿನ ಕೇಸಿನಲ್ಲಿ ಯಾವುದೇ ದಂಡವನ್ನು ತುಂಬಿಲ್ಲ. ನಾನು ಮತ್ತು ಸಂತೋಷ ಗೌಡ ಶರಾವತಿ ಹೊಳೆಯಿಂದ ಮರಳನ್ನು ಸಾಗಿಸುತ್ತೇವೆ ಎಂದರೆ ಸರಿಯಲ್ಲ. ನಾನು ಅಪಘಾತವನ್ನು ನೋಡದೇ ಇದ್ದರೂ ಸಂತೋಷ ಗೌಡರ ಸ್ನೇಹದ ಕಾರಣಕ್ಕೆ ಅಪಘಾತವನ್ನು ನೋಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಆ ದಿನ ನನ್ನ ಕೆಎ-47/ಆರ್-1848 ಪಲ್ಸರ್ ಬೈಕನಲ್ಲಿ ಹೋಗುತ್ತಿದ್ದೆ. ಚಾಸಾ-6 ರವರು ರಾಂಗ್ ಸೈಡಿಗೆ ಹೋಗಿದ್ದರಿಂದಲೇ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಚಾಸಾ-6 ರವರ ತಪ್ಪಿನಿಂದಲೇ ಅಪಘಾತ ಆಗಿದ್ದರೂ ಸಹ ಮೃತರ ಕುಟುಂಬದವರಿಗೆ ಪರಿಹಾರ ಸಿಗಲಿ ಎನ್ನುವ ಕಾರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

Sd/-

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**